ಶ್ರೀ ಜಿ. ದುಗ್ಗಪ್ಪ.—ಈ ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಸ್ವಲ್ಪ ಕಡಿಮೆ ಇದೆ. ಇದು ಅರಣ್ಯ ಪ್ರದೇಶವಾದರೂ ಗೋಮಾಳಕ್ಕೆ ಸ್ವಲ್ಪಮಟ್ಟಿಗೆ ಅನುಕೂಲವಾಗಿರುವುದರಿಂದ ಅಲ್ಲೆಲ್ಲಾ ಗುಡ್ಡ ಗಾಡು ಪ್ರದೇಶಗಳಿರುವುದರಿಂದ, ಈ ಜಮೀನನ್ನು ವ್ಯವಸಾಯಕ್ಕೆ ಯೋಗ್ಯಪ್ರದೇಶವನ್ನಾಗಿ ಮಾಡಲು ಅದನ್ನು ಬಿಡುಗಡೆಮಾಡುವುದಕ್ಕೆ ಸಾಧ್ಯವೇ ?

ಶ್ರೀ ಬಿ. ರಾಚಯ್ಯ.—ಅದಕ್ಕೋಸ್ಕರ ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಆ ಕಮಿಟಿ ಯಲ್ಲಿ ಈ ಪ್ರಶ್ನೆ ಇನ್ನೂ ತೀರ್ಮಾನವಾಗಿಲ್ಲ. ಈ ಜಮೀನನ್ನು ಬಿಡುಗಡೆ ಮಾಡಬೇಕೆಂದು ಅವರು ಶಿಫಾರ್ಸು ಮಾಡಲಲ್ಲ.

Mr. SPEAKER.—Question Hour is over. Now Short Notice Questions and Answers.

SHORT NOTICE QUESTIONS AND ANSWERS

Death due to Small Pox

Q.—104. Sri S. M. GURADDI (Muddebihal).—

Will the Minister for Health and Housing be pleased to state :—

(*a*) the number of persons that died on account of small pox in and around Muddebihal during June 1967 ;

(*b*) the steps taken by the concerned Department to prevent the spreading of the disease to other parts ?

A.—Sri K. PUTTASWAMY (Minister for Health and Housing).—

(*a*) There were 3 deaths reported during the month in Muddebihal and no infection reported around Muddebihal.

(*b*) Mass Vaccinations against small pox in the infected village and surrounding areas.

ಶ್ರೀ ಎಸ್. ಎಂ. ಗುರಡ್ಡಿ.—ರಾಜ್ಯದಲ್ಲಿ ಪ್ರತಿವರ್ಷವೂ ಸಾರ್ವತ್ರಿಕವಾಗಿ ದೇವಿ ಹಾಕುವಂಥ ಕೆಲಸ ನಡೆಯುತ್ತಿತ್ತು. ಇದು ಬಂದ್ ಆದ್ದರಿಂದ ಈಗ ಎಲ್ಲೆಲ್ಲಿಯೂ ಸಿಡುಬುರೋಗ ಹಬ್ಬಿದೆ ಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† Sri K. PUTTASWAMY.—There is small-pox eradication scheme. We are trying to eradicate it. But unfortunately, it has recurred in Muddebihal and it is being brought under control.

Sri V. N. PATIL.—Is the scheme being eradicated or the disease ?

Sri K. PUTTASWAMY.—The Hon'ble Member may draw any inference he pleases.

ಶ್ರೀ ಎಸ್. ಎಂ. ಗುರಡ್ಡಿ.—ತಮ್ಮ ಯೋಜನೆಯ ಪ್ರಕಾರ ಅಲ್ಲಿರತಕ್ಕ ಸಿಬ್ಬಂದಿಯವರು ಪ್ರತಿ ವರ್ಷವೂ ಕೆಲಸ ಮಾಡುತ್ತಿದ್ದಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾಡುತ್ತಿದ್ದಾರೆ.

ಶ್ರೀ ಎನ್. ಲೋಕಯ್ಯನಾಯಕ್.—(ಅ) ಗೆ ಉತ್ತರವಾಗಿ ರೋಗ ತಗುಲಿರುವ ಗ್ರಾಮದಲ್ಲಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಸಿಡುಬಿನ ವಿರುದ್ಧವಾಗಿ ಸಾಮೂಹಿಕವಾಗಿ ದೇವಿಯನ್ನು ಹಾಕಲಾಯಿತು ಎಂದು ಹೇಳಿದೆ. ಅಂದಮೇಲೆ ಇದಕ್ಕಿಂತ ಮೊದಲು, ಅಲ್ಲಿ ಸಾಮೂಹಿಕವಾಗಿ ಯಾವಾಗ ಸಿಡುಬು ಹಾಕಿಸಿದ್ದೀರಿ ? ಆಗ್ಗೆ ತಪ್ಪಿ ಹೋದವರೆಲ್ಲರೂ ಈಗ ಸಾಮೂಹಿಕವಾಗಿ ಹಾಕಿಸಿ ಕೊಳ್ಳಲಿಲ್ಲವೇ ?

Sri K. PUTTASWAMY.—Sir, I am not able to furnish that reply.

Varna Channel

Q.—132. Sri M. MANCHE GOWDA (Maddur), Sri NAGAPPA (Mandya) and Sri K. SINGARI GOWDA (Nagamangala). —

Will the Minister for Public Works be pleased to state.—

(*a*) whether it is a fact that representations have been made to the Government against the construction of Varna channel ;

(*b*) if so, the action Government proposes to take in this behalf ?

A.—Sri VEERENDRA PATIL (Minister for Public Works) :—

(*a*) Yes.

(*b*) The matter is being examined.

ಶ್ರೀ ಎಂ. ಮಂಚೇಗೌಡ.— ಸರ್ಕಾರದವರೇ ಮಂಡ್ಯಾ ಹಾಗೂ ಮೈಸೂರು ಜಿಲ್ಲೆಯ ಕೆಲವು ಭಾಗಗಳ ರೈತರ ಕಷ್ಟ ಪರಿಸ್ಥಿತಿ ಮತ್ತು ಆಗುಹೋಗುಗಳನ್ನು ನಿರ್ಧರಿಸುವವರಾದ್ದರಿಂದ, ಈ ವರುಣಾ ನಾಲೆಯ ನಿರ್ಮಾಣದ ಬಗ್ಗೆ ಹೆಚ್ಚಿಗೆ ಅನುಭವಸ್ಥರಿಂದ ಕೂಡಿದಂಥ ಒಂದು ತಜ್ಞರ ಸಮಿತಿಯನ್ನು ಸರ್ಕಾರದವರು ನೇಮಕ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಒಂದು ತಜ್ಞರ ಸಮಿತಿಯನ್ನು ನೇಮಿಸುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಾ ಇದೆ. ಇಷ್ಟರಲ್ಲೇ, ಅದರ ಬಗ್ಗೆ ಒಂದು ನಿರ್ಣಯವನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ. ಮಂಚೇಗೌಡ.—ಈ ಯೋಜನೆಯ ಕೆಲಸವನ್ನು ನಿಲ್ಲಿಸುವುದಕ್ಕೇನಾದರೂ ಸರ್ಕಾರದಿಂದ ಆದೇಶವನ್ನು ಕೊಟ್ಟಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ತಜ್ಞರ ಸಮಿತಿ ಪರಿಶೀಲನೆಮಾಡಿ ಅವರು ಒಂದು ವರದಿಯನ್ನು ಕೊಡುವವರೆಗೂ ಆ ಕೆಲಸವನ್ನು ಮುಂದುವರಿಸಬಾರದೆಂದು ಹೇಳಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ನಾನು ಅಲ್ಪ ಕಾಲಾವಧಿ ಪ್ರಶ್ನೆಯನ್ನು ಕಳುಹಿಸಿ ಈಗ್ಗೆ ಒಂದು ವಾರಗಳಾದುವು. ಇನ್ನೂ ಅವಕ್ಕೆ ಉತ್ತರವೇ ಸರ್ಕಾರದಿಂದ ಬರಲಿಲ್ಲ.

(ಉತ್ತರವಿಲ್ಲ)